ಇಂದು ದಿಃ 18/2/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 4 ನೇ ಎದುರುದಾರ ಪರ ಶ್ರೀ ಎ ಜೆ ಸುಬ್ರಹ್ಮಣ್ಯ ಶರ್ಮ ವಕೀಲರಿಂದಃ

ನಾನು ನನ್ನ ಬಾಮೈದ ಪ್ರತಾಪ್ ರವರ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿದ್ದಾಗ ಅಘಾತವಾಗಿತ್ತು. ನನ್ನ ಹೊರತು ಬೇರೆ ಯಾರೂ ಕೂಡ ಸವಾರರು ಆ ವಾಹನದಲ್ಲಿ ಇರಲಿಲ್ಲ. ಆ ಸಮಯ ನಾನು ಅತ್ತೆ ಮನೆಗೆ ಹೋಗುತ್ತಿದ್ದೆ. ಆ ಸಮಯ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿದ್ದವು. ನಾನು ಅತಿವೇಗದಿಂದ ವಾಹನ ಚಾಲಾಯಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆ 30 ಅಡಿ ಅಗಲ ಇದೆ ಎಂದರೆ ನಿಜ. ಅಪಘಾತದ ಸ್ಥಳದಲ್ಲಿ ರಸ್ತೆ ನೇರವಾಗಿ ಇದೆ ಎಂದರೆ ನಿಜ. ಎದುರುಗಡೆಯಿಂದ ಬಂದ ಮೋಟಾರ್ ಬೈಕ್ ಅನ್ನು ನಾನು ಎಷ್ಟು ದೂರದಿಂದ ನೋಡಿದೆ ಎಂದು ಕೇಳಿದರೆ ಅದು ಹತ್ತಿರ ಬಂದಾಗ ನೋಡಿದ್ದು ಎಂದು ನುಡಿಯುತ್ತೇನೆ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ನನ್ನನ್ನು 2 ನೇ ಆರೋಪಿಯಾಗಿ ದೋಷಾರೋಪಣಾ ಪಟ್ಟಿಯಲ್ಲಿ ಪೊಲೀಸರು ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆನಿಜ. ಸದರಿ ದೋಷಾರೋಪಣಾ ಪಟ್ಟಿಯ ಅನುಸಾರ ದಾಖಲಾದ ಕ್ರಿಮಿನಲ್ ಪ್ರಕರಣದಲ್ಲಿ ನಾನು ತಪ್ಪೊಪ್ಪಿಗೆ ಹೇಳಿಕೆ ನೀಡಿ ದಂಡಕಟ್ಟಿ ಬಂದಿದ್ದೇನೆ ಎಂದರೆ ನಿಜ.

ಅಪಘತವಾದ ನಂತರ 1 ದಿನ ಕಾವೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನ್ನ ಕಾಲಿನಲ್ಲಿ ತೊಡೆಯ ಮೂಳೆ ಮುರಿದಿತ್ತು ಹಾಗು ಕಣ್ಣಿನ ಬಳಿ ಏಟಾಗಿತ್ತು. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಬಲಗಣ್ಣಿನಲ್ಲಿ ದೃಷ್ಟಿ ಇಲ್ಲ. ಆರೀತಿ ಬಲಗಣ್ಣಿನ ದೃಷ್ಟಿದೋಷ ನನಗೆ ಅಪಘಾತಕ್ಕೂ ಮೊದಲೆ ಇದೆ ಎಂದರೆ ಸರಿಯಲ್ಲ. ನನ್ನ ಕಾಲಿಗೆ ಶಸ್ತ್ರಚಿಕಿತ್ಸೆ ಮಾಡಿದ್ದು ಡಾಃ ವಿಜಯ್ . ನನ್ನ ಕಣ್ಣಿನ

ಕುರಿತು ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ಗೊತ್ತಿಲ್ಲ.

ನನಗೆ ಈಗ ನೆಡೆಯಲು ಆಗುತ್ತಿಲ್ಲ. 6 ತಿಂಗಳ ಹಿಂದೆ ವೈದ್ಯರ ಬಳಿ ಹೋಗಿದ್ದೆ. ಅಪಘಾತಕ್ಕೂ ಮೊದಲು ವ್ಯವಸಾಯ ಮಾಡುತ್ತಿದ್ದೆ. ನನ್ನ ಆದಾಯ ತೋರಿಸುವ ದಾಖಲೆ ಹಾಜರು ಪಡಿಸಿಲ್ಲ ಎಂದರೆ ನಿಜ. ಮೊದಲಿನಂತೆಯೇ ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ನಿಜ. ನನ್ನ ತಪ್ಪಿನಿಂದಲೇ ಅಪಘಾತವಾಗಿರುವುದು ಎಂದರೆ ಸರಿಯಲ್ಲ. ನಾನು ದ್ವಿತೀಯ ಪಿ ಯು ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅಪಘಾತದ ಸಮಯ ನನ್ನ ವಯಸ್ಸು ಎಷ್ಟು ಇತ್ತು ಎಂದು ತೋರಿಸಲು ದಾಖಲೆಹಾಜರು ಪಡಿಸಿಲ್ಲ ಎಂದರೆ ಗೊತ್ತಿಲ್ಲ.

ಪಾಟೀ ಸವಾಲ್ಲುಃ ಇತರೆ ಎದುರುದಾರರಿಂದಃ

ಯಾವುದೇ ಕೋರಿಕೆ ಇಲ್ಲ , ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ನಂಜನಗೂಡು.